ಶಬ್ದದಲ್ಲಿನ ಬಹುವಚನ ಎಚ್ಚರದಿಂದ ಗಮನಿಸಿದೆ. ಉಪಾಯವಾಗಿ ಹೊರಬಂದು ಸುರಕ್ಷಿತ ಮನೆ ಸೇರಿದೆ. ಪ್ರಾಣಹೋದರೂ ಮನೆಪಾರ್ಟಿಗಳಿಗೆ ಹೋಗಬಾರದು ಎಂದು ಅಂದೇ ಸಂಕಲ್ಪ ಮಾಡಿದೆ.

ಪಾನಿಗಳ ಕುಟುಂಬವು ಮುರುಕು ನಾವೆಯಲ್ಲಿ ಬಿರುಸಾದ ಕಡಲಿನೊಳಗೆ ಪಯಣ ಹೊರಟಂತೆ. ನೌಕಾಘಾತ ನಿಶ್ಚಿತ. ಲಗ್ನವಾದ ಹೊಸತರಲ್ಲಿ ನಾನು ಪಡೆದ ಅಭೂತಪೂರ್ವ ಸ್ವಾಗತ ಘಟನೆಯು ಸ್ಮೃತಿಪಟಲದಲ್ಲಿ ಈಗ ಹಾಯುತ್ತಿದೆ. ದುರದೃಷ್ಟದ ಆ ಸಂಜೆ, ನೇಹಿಗರ ಕೂಟದಲ್ಲಿ ಸಿಂಗಲ್ ಬೀರೇರಿಸಿ, ಅದರ ಕಂಪನ್ನು ತಗ್ಗಿಸುವಂತೆ ಚಾಕಲೇಟು ಪಾನಬೀಡಾಗಳನ್ನು ಅಡ್ಡಡ್ಡ ಮೆದ್ದು, ತುಸು ತಡವಾಗಿ ಮನೆಗೆ ಬಂದೆ. ಬಾನು ಹೊಸಿಲಬಳಿ ಬಂದು ಕದ ತೆಗೆದಾಗ ಸಾಧ್ಯವಾದಷ್ಟೂ ಉಸಿರು ಬಿಗಿಹಿಡಿದೆ. ಕಿಂಗ್‌ಫಿಶರ್ ವಾಸನೆ ಕಟುವಾಗಿತ್ತೊ ಅವಳ ನಾಸಿಕ ಚುರುಕಾಗಿತ್ತೊ ತಿಳಿಯದು, ಹಾವು ತುಳಿದವಳಂತೆ ಒಳನಡೆದುಬಿಟ್ಟಳು. ಕದವಿಕ್ಕಿದ ಕೋಣೆಯಿಂದ ಬಿಕ್ಕುವ ಮೂಗೆಳೆದುಕೊಳ್ಳುವ ಸದ್ದು ಎಷ್ಟೊ ಹೊತ್ತು ತೋಡಿರಾಗದಲ್ಲಿ ಪ್ರಸಾರವಾಯಿತು. ಉಪವಾಸ ಸತ್ಯಾಗ್ರಹ–ಮೌನವ್ರತಗಳಿಂದ ಮನೆ ಸಬರಮತಿ ಆಶ್ರಮವಾಯಿತು. ತಪ್ಪಾದರೂ ನನ್ನದೇ. ನಿತ್ಯಸಂಜೆ ಗಡಂಗಿಗೆ ಹೋಗುವ ಬೀದಿಕುಡುಕರನ್ನೂ, ತಿಂಗಳಿಗೊಮ್ಮೆ ಗೆಳೆಯರು ಕಲೆತಾಗ ಸಂತೋಷಕ್ಕಾಗಿ ಎಳೆಗೂಸು ಒಳಲೆಯಲ್ಲಿ ಹಾಲುಕುಡಿವಂತೆ ಆಲ್ಕೊಹಾಲು ಸೇವಿಸುವವರನ್ನೂ ವೈಜ್ಞಾನಿಕವಾಗಿ ವಿಂಗಡಿಸಿ ವಿವರಿಸಬೇಕಿತ್ತು; ಪಾನಕೂಟಗಳು ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಸಾಮಾನ್ಯವೆಂದೂ, ಅಲ್ಲಿ ಮಹಿಳೆಯರೂ ಸೇರುವರೆಂದೂ, ನಮ್ಮಲ್ಲಿ ಮನೆಮಂದಿ ಒಟ್ಟಿಗೆ ಕೂತು ಕಾಫಿಟೀ ಕುಡಿವಂತೆ ಶೀತಪ್ರದೇಶಗಳಲ್ಲಿ ಮದ್ಯಸೇವಿಸುವರೆಂದೂ ಸ್ಪಷ್ಟೀಕರಣ ನೀಡಬೇಕಿತ್ತು. ಗಾಲಿಬ್ ಮುಂತಾದವರು ಮದ್ಯವನ್ನೇ ಶಾಯಿಯಾಗಿ ಬಳಸಿ ಕಾವ್ಯ ಬರೆದವರೆಂದು ಉರ್ದು ಸಾಹಿತ್ಯದ ವಿದ್ಯಾರ್ಥಿಯಾಗಿರುವ ಆಕೆಗೆ ನೆನಪಿಸಬೇಕಿತ್ತು; ಮದ್ಯವೆಂದರೆ ಬರಿ ಹೆಂಡವಲ್ಲ; ಅಲ್ಲಿ ಘನತೆವೆತ್ತ ಪೇಯಗಳಿವೆ; ತೆಂಗು–ಈಚಲುಗಳಿಂದ ಹೊರಬರುವ ನೀರಾ ತಾಯಹಾಲಿಗೆ ಸಮ; ಫಲರಸದಿಂದ ಉತ್ಪತ್ತಿಯಾಗುವ ವೈನು, ಜಿನ್ನು ಸ್ತ್ರೀಸಂಕುಲಕ್ಕಾಗಿಯೇ ವಿಜ್ಞಾನಿಗಳು ಕಂಡುಹಿಡಿದ ಜೀವರಸಗಳು ಎಂದು ಸಮಜಾಯಿಶಿಸಬೇಕಿತ್ತು.

ಆದರೇನು ಮಾಡುವುದು, ಆಕೆ ಸಂಪ್ರದಾಯಸ್ಥ ಮನೆಯಲ್ಲಿ ಬೆಳೆದವಳು; ಕುಡುಕರು ಬೇಖಬರಿನಲ್ಲಿ ರಸ್ತೆಬದಿಯ ಧೂಳಿಯಲ್ಲಿ ಉರುಳಾಡುವ, 'ಎಲೆಲೆಲೆ ರಸ್ತೆ ಏನಿದವ್ಯವಸ್ಥೆ' ಎಂದು ತಾರಾಡುವ, ದೃಶ್ಯಗಳನ್ನು ಸಿನಿಮಾಗಳಲ್ಲಿ ಕಂಡವಳು. ಸಿನಿಮಾ–ನಾಟಕಗಳಾದರೂ ಯಾಕಿಂಥ ಏಕಮುಖೀ ಸತ್ಯವನ್ನು ಕಟ್ಟಿಕೊಡುತ್ತವೆಯೊ? ಅವಳಿಗೆ ನನ್ನೀ ವರ್ತನೆಯಿಂದ ಖರೇಖರೇ ಆಘಾತವಾಗಿತ್ತು. ಅವಳ ಕೋಮಲ ಭಾವನೆಗಳ ಮೇಲೆ ನಾನು ಆಕ್ರಮಣ ಮಾಡಿದ್ದೆ. ಚೇತರಿಕೆಗೆ ಬಹುಕಾಲ ಹಿಡಿಯಿತು. ಇದಕ್ಕೆ ಬೇಕಾಗಿ ಆಕೆ ಗೌರವಿಸುವ ಪರಿಚಿತರ ಮನೆಗಳಲ್ಲಿ ದಂಪತಿಗಳು ಇಷ್ಟಿಷ್ಟೆ ಸೇವಿಸಿ ಹರಟೆ ಹೊಡೆಯುವುದನ್ನು ತೋರಿಸಿದೆ; ಹೋಟೆಲುಗಳಲ್ಲಿ ವಿದೇಶಿ ಪ್ರವಾಸಿಗರು ಗಂಡು ಹೆಣ್ಣು ಸಮೇತ ಮೇಜಿನಮೇಲೆ ಮೇಣದಬತ್ತಿ ಹೊತ್ತಿಸಿಕೊಂಡು, ನಿಧಾನವಾಗಿ ಗುಟುಕರಿಸುತ್ತ ಚರ್ಚಿಸುವ ದೃಶ್ಯವನ್ನು ಕಣ್ಣಾರೆ ಕಾಣುವಂತೆ ಮಾಡಿದೆ. ಶರಬತ್ತಿನ ಕಡುರೂಪಗಳಾದ ವೈನು–ಬೀರುಗಳು ಮದ್ಯಗಳೇ ಅಲ್ಲವೆಂದೂ, ಅವನ್ನು ತೆಳ್ಳಗಿರುವವರು ಸೇವಿಸಿದರೆ ಆರೋಗ್ಯ ಕಳಕಳಿಸುವುದೆಂದೂ (ಆಗ ನಾನು ಸಣಕಲಾಗಿದ್ದೆ), ದ್ರಾಕ್ಷಿಬೆಳೆವ ಪ್ರದೇಶಗಳಲ್ಲಿ ದ್ರಾಕ್ಷಾರಸವು ದೈನಿಕ ಪೇಯವಾಗಿದೆಯೆಂದೂ ಪ್ರತಿಪಾದಿಸಿದೆ.